**ಸಾಕ್ಷಿಯನ್ನು ದಿನಾಂಕಃ-12.12.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ನನ್ನ ಹಾಗೆ ಆದಂತಹ ಎಲ್ಲ ಶಿಕ್ಷಕರು ಸೇರಿ ಚಾಸಾ-1 ರವರಿಗೆ ತಿಳಿಸಿದ್ದೇವೆ. ನಂತರ ಚಾಸಾ-1 ರವರ ಕಚೇರಿಯಲ್ಲಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೇವೆ. ಬಾಕಿ ಹಣವನ್ನು ತೆಗೆದುಕೊಂಡು ಬೇರೆಯವರ ಖಾತೆಗೆ ಆರೋಪಿ ಹಾಕಿದ್ದರು. ರಜೆ ಗಳಿಕೆಯ ಅರ್ಜಿಯನ್ನು ಪಡೆದುಕೊಳ್ಳದೇ ಆರೋಪಿ ಹಣವನ್ನು ಶಿಕ್ಷಕರ ಖಾತೆಗೆ ಹಾಕಿರುತ್ತಾನೆ. ದಿನಾಂಕ 03.03.2018 ರಂದು ನಾವೆಲ್ಲರೂ ಸೇರಿ ಮತ್ತು ಚಾಸಾ-1 ರವರು ಸೇರಿ ದೂರನ್ನು ಕೊಟ್ಟಿದ್ದೇವೆ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**ಪಾಟೀ ಸವಾಲುಃ- ಸ.ಸ.ಅ. ರವರಿಂದಃ-**

ನಾವು ಚಾಸಾ-1 ರವರ ಕಚೇರಿಗೆ ಹೋಗಿ ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಆರೋಪಿ ಗಳಿಕೆ ರಜೆಯ ಅರ್ಜಿಯನ್ನು ಪಡೆದುಕೊಳ್ಳದೇ ಹೆಚ್.ಆರ್.ಎಮ್.ಎಸ್. ನಲ್ಲಿ ನೊಂದಣಿ ಮಾಡಿಕೊಂಡು ಸರಕಾರಿ ಟೋಕನ್ ನಂ.416/17-18 ಓಜಿ-000994051 ನ್ನು ಬಳಸಿ ಅಪ್ರೂವಲ್ ಸಂಖ್ಯೆ 2812201179337825 ಹಾಗೂ ಸರಕಾರಿ ಟೋಕನ್ ನಂ.269/2017-18 ಓಜಿ 2231202 ನ್ನು ಬಳಸಿ ಚಾಸಾ-1 ರವರ ಗಮನಕ್ಕೆ ತರದೇ ಅನುದಾನ ಪುಸ್ತಕದಲ್ಲಿ ಬಿಲ್ಲನ್ನು ಸೃಷ್ಟಿ ಮಾಡಿ ದಿನಾಂಕ 28.12.2017 ಮತ್ತು 15.09.2017 ರಂದು ಚೆಕ್ ನ್ನು ಪಡೆದುಕೊಂಡು ನನ್ನ ಬ್ಯಾಂಕ್ ಖಾತೆಗೆ ರೂ.20,000-00 ಗಳನ್ನು ಹಾಕಿದ್ದಾರೆ ಎಂದರೆ ಸರಿ. ನನ್ನಂತೆ ಉಳಿದ ಶಿಕ್ಷಕರಿಗೂ ಸಹ ಹಣವನ್ನು ಹಾಕಿದ್ದಾರೆ ಎಂದರೆ ಸರಿ. ಚಾಸಾ-1 ಇವರಂತೆಯೇ ದಾಖಲಾತಿಗಳ ಮೇಲೆ ಸಹಿ ಕಂಡು ಬಂದಿತ್ತು ಎಂದರೆ ಸರಿ. ಚಾಸಾ-1 ರವರು ಯಾವುದೋ ಕೆಲಸ ಒತ್ತಡದಲ್ಲಿದ್ದಾಗ ಆರೋಪಿ ಸಹಿ ಪಡೆದುಕೊಂಡು ಖಾಜಾನೆಗೆ ಸಲ್ಲಿಸಿ ವಂಚನೆ ಮಾಡಿದ್ದು ಗೊತ್ತಾಯಿತು ಎಂದರೆ ಸರಿ. ಆರೋಪಿ ಶಿಕ್ಷಕರಿಗೆ ನಿಮ್ಮ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಿದ್ದೇನೆ, ನಾನು ಅಯ್ಯಪ್ಪ ದೇವರ ದರ್ಶನಕ್ಕೆ ಹೋಗಬೇಕಾಗಿದೆ ಎಂದು ಮತ್ತು ನಮ್ಮ ತಾಯಿಗೆ ಆಸ್ಪತ್ರೆಗೆ ಹೋಗಬೇಕಾಗಿದ್ದು ಅಂತಾ ನಂಬಿಸಿ ನಮ್ಮೆಲ್ಲಾ ಶಿಕ್ಷಕರ ಖಾತೆಗೆ ಹಣ ಜಮಾ ಮಾಡಿ ಹಣ ಪಡೆದುಕೊಂಡು ಸರಕಾರಕ್ಕೆ ನಂಬಿಕೆ

ದ್ರೋಹ ಮಾಡಿ ಒಟ್ಟು ರೂ.3,11,118/- ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾನೆಂದರೆ ಸರಿ. ನಾನು ಇದೇ ರೀತಿ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಮುಖ್ಯ ವಿಚಾರಣೆಯಲ್ಲಿ ಸರಿಯಾಗಿ ಸಾಕ್ಷಿ ಹೇಳಿಲ್ಲ ಅನ್ನುವುದು ಸರಿಯಲ್ಲ.

**ಪಾಟೀ ಸವಾಲುಃ-** ಆರೋಪಿ ಹಾಜರಿದ್ದು ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ                                        ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.